# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆ:** 5037/2023 ಪ್ರಾಸಾ-22
ಚಾಸಾ-28

ದಿನಾಂಕಃ 26-05-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ಹನುಮಂತರಾಯಪ್ಪ |
| **ತಂದೆಯ / ಗಂಡನ ಹೆಸರು** | ಹನುಮಂತಪ್ಪ |
| **ವಯಸ್ಸು** | 53 |
| **ಉದ್ಯೋಗ** | ಗಾರೆ ಕೆಲಸ |
| **ವಾಸಸ್ಥಳ** | ಹನುಮಂತನಹಳ್ಳಿ |

**<u>ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-</u>**

ದಿ.16.08.2023 ರ ಅಮಾನತ್ತು ಪಂಚನಾಮೆಯಲ್ಲಿ ತಮ್ಮ ಸಹಿ ಇರುತ್ತದೆ, ಅದನ್ನು ಗುರುತಿಸುತ್ತೇನೆ ಸದರಿ ಅಮಾನತ್ತು ಪಂಚನಾಮೆಯನ್ನು ನಿಪಿ-19 ಎಂದು ಸಾಕ್ಷಿ ಸಹಿಯನ್ನು ನಿಪಿ-19(ಎ) ಎಂದು ಗುರುತಿಸಲಾಯಿತು. ಸುಮಾರು 2 ವರ್ಷಗಳ ಹಿಂದೆ ಬೂದಿಬೆಟ್ಟದ ಪಕ್ಕದಲ್ಲಿ ಗಾರೆ ಕೆಲಸ ಮಾಡುತ್ತಿದ್ದಾಗ ಪೋಲೀಸರು 5-00 ರಿಂದ 5-30 ಗಂಟೆಗೆ ಸುಮಾರಿಗೆ ನನ್ನ ಸಹಿ ತೆಗೆದುಕೊಂಡಿರುತ್ತಾರೆ. ಪೊಲೀಸರು ಆ ದಿನ ಕೊಲೆ ಮಾಡಿದ ವ್ಯಕ್ತಿಯನ್ನು ಕರೆದುಕೊಂಡು ಬಂದಿದ್ದರು , ಸದರಿ ವ್ಯಕ್ತಿಯನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ. ವಿ.ಸಿ. ಮುಖಾಂತರ ಹಾಜರುಪಡಿಸಿದ ಆರೋಪಿಯನ್ನು ನೋಡಿ ಗುರುತಿಸಿರುವುದಿಲ್ಲ. ಪೊಲೀಸರು ನನ್ನ ಸಮಕ್ಷಮ ಏನನ್ನೂ ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಸಾಕ್ಷಿಗೆ ಎರಡು ಪೋಟೋ ತೋರಿಸಲಾಗಿ ಅದರಲ್ಲಿ ತಮ್ಮ ಇರುವಿಕೆಯನ್ನು ಗುರುತಿಸಿರುತ್ತಾರೆ. ಸದರಿ 2 ಪೊಟೋಗಳನ್ನು ಕ್ರಮವಾಗಿ ನಿಪಿ-20 ಮತ್ತು ನಿಪಿ-21 ಎಂದು ಗುರುತಿಸಲಾಯಿತು. ಪೊಟೋದಲ್ಲಿ ಉಳಿದವರು ಯಾರು ಯಾರು ಇರುತ್ತಾರೆಂದು ನನಗೆ ಗೊತ್ತಾಗುವುದಿಲ್ಲ.

ನ್ಯಾಯಾಲಯದ ಮುಂದೆ ಇರುವ ಸೀಲ್ ಆಗಿರುವ ಒಂದು ಬಿಳಿ ಚೀಲದ ಮೇಲೆ ಅಂಟಿಸಿರುವ ಚೀಟಿಯಲ್ಲಿ ನನ್ನ ಸಹಿ ಇರುತ್ತದೆ, ಅದರ ಒಳಗೆ ಏನು ಇರುತ್ತದೆ ಎಂದು ನನಗೆ ಗೊತ್ತಿಲ್ಲ. ನಿಪಿ-20 ಮತ್ತು ನಿಪಿ-21 ರಲ್ಲಿ ಕಾಣಿಸುತ್ತಿರುವ ವ್ಯಕ್ತಿ ಏನು ಹೇಳಿ ಏನು ಹಾಜರುಪಡಿಸಿರುತ್ತಾರೆಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿಸಲಾಯಿತು)**

**<u>ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ-</u>**

ದಿ. 16.08.2023 ರಂದು ಸಾಯಂಕಾಲ 4-30 ಗಂಟೆಗೆ ಪೊಲೀಸರು ನನ್ನನ್ನು ಮತ್ತು ರಾಜುರವರನ್ನು ಗ್ರಾಮ ಪಂಚಾಯಿತಿ ಹತ್ತಿರ ಕರೆಸಿದ್ದರು ಅಲ್ಲಿ ತಮ್ಮ ವಶದಲ್ಲಿದ್ದ ಆರೋಪಿ ರಾಮಾಂಜಿಯವರನ್ನು ಪರಿಚಯ ಮಾಡಿಸಿದರು ಆಗ ಆರೋಪಿ ನನ್ನ ಹೆಂಡತಿಯನ್ನು ಒಣಕೆಯಿಂದ ಕೊಲೆ ಮಾಡಿದ್ದು ಅದು ಎರಡು ತುಂಡಾಗಿದ್ದು ಒಂದು ತುಂಡು ಮತ್ತು ಒಂದು ಮೊಬೈಲ್ ನ್ನು ತೆಗೆದುಕೊಂಡು ಹೋಗಿ ಅದನ್ನು ಕಲ್ಲಿನಿಂದ ಜಜ್ಜಿ ಹಾಕಿದ್ದು ತನ್ನ ಜೊತೆಯಲ್ಲಿ ಬಂದರೆ ತೋರಿಸುವುದಾಗಿ ಹೇಳಿದ ಎಂದರೆ ಸರಿಯಲ್ಲ.

ನಂತರ ನಮ್ಮನ್ನು ಮತ್ತು ಪೊಲೀಸರನ್ನು ಆರೋಪಿಯು ಬೆಟ್ಟದ ಕಡೆಗೆ ಹೋಗುವ ಕಾಲುದಾರಿಯ ಪಕ್ಕದಲ್ಲಿದ್ದ ಒಂದು ಗಿಡದ ಹತ್ತಿರ ಕರೆದುಕೊಂಡು ಹೋಗಿ ಗಿಡದ ಕೆಳಗೆ ಒಣಕೆ 2 ತುಂಡು, ಜಜ್ಜಿ ಹೋಗಿರುವ ಮೊಬೈಲ್ ಮತ್ತು ಬ್ಯಾಟರಿಯನ್ನು ಹಾಜರುಪಡಿಸಿದ ಅವುಗಳನ್ನು ಪೊಲೀಸರು ನನ್ನ ಸಮಕ್ಷಮ ಅಮಾನತ್ತುಪಡಿಸಿಕೊಂಡು ಪಂಚನಾಮೆ ಮಾಡಿ ನನ್ನ ಸಹಿ ತೆಗೆದುಕೊಂಡರು ಎಂದರೆ ಸರಿಯಲ್ಲ. ಆ ದಿನ ಪೊಲೀಸರು ಫೋಟೋದಲ್ಲಿರುವ ವಸ್ತುಗಳನ್ನು ನನ್ನ ಸಮಕ್ಷಮ ಅಮಾನತ್ತುಪಡಿಸಿಕೊಂಡಿದ್ದರೂ ಕೂಡ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲು ಶ್ರೀ. ಪಿ.ಎನ್.ಆರ್. ವಕೀಲರಿಂದ ಆರೋಪಿ ಪರವಾಗಿಃ-</u>**

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ, ಸಹಿ ಮಾಡುವುದನ್ನು ಬಿಟ್ಟು ಬೇರೆ ಏನೂ ಬರುವುದಿಲ್ಲ. ನಿಪಿ-19 ರಲ್ಲಿ ಬರೆದ ವಿಷಯ ನನಗೆ ಗೂತ್ತಿರುವುದಿಲ್ಲ. ನಿಪಿ-19 ನ್ನು ಯಾರು ಎಲ್ಲಿ ಬರೆದಿರುತ್ತಾರೆಂದು ನನಗೆ ಗೊತ್ತಿಲ್ಲ ಎನ್ನುವುದು ನಿಜ. ನ್ಯಾಯಾಲಯದ ಮುಂದೆ ಇರುವ ಬಿಳಿ ಚೀಲದ ಮೇಲೆ ಅಂಟಿಸಿರುವ ಚೀಟಿಯಲ್ಲಿರುವ ಸಹಿ ನನ್ನ ಸಹಿ ತರ ಇರುತ್ತದೆ ಆದರೆ ನನ್ನದಲ್ಲ.

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ತುಮಕೂರು-ಮಧುಗಿರಿ.**